ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1293(1766)
ವಿಧಾನ ಸಭಾ ಸದಸ್ಯರ ಹೆಸರು : ಶ್ರೀ. ಸಿದ್ದು ಸಾವದಿ (ಜಮಖಂಡಿ)
ಉತ್ತರಿಸುವವರು : ಶ್ರೀ. ಹೆಚ್. ಕೆ. ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಇಲಾಖೆಯಿಂದ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಪೂರೈಸಲಾಗುತ್ತಿರುವ ಸೌಲಭ್ಯಗಳಾವುವು; ಎಷ್ಟು ಪ್ರಮಾಣದಲ್ಲಿ ವಿತರಿಸಲಾಗುವುದು (ಸಂಪೂರ್ಣ ಮಾಹಿತಿ ನೀಡುವುದು);

ವಿವರವನ್ನು ಅನುಬಂಧ–1ರಲ್ಲಿ ಒದಗಿಸಿದೆ.

ಆ) 2006–07ರಲ್ಲಿ ಮೇಲಿನ ಎಲ್ಲ ಯೋಜನೆ ಅಡಿ ಜಮಖಂಡಿ ತಾಲ್ಲೂಕಿಗೆ ಒದಗಿಸಿದ ಸೌಲಭ್ಯಗಳಾವುವು;

ವಿವರವನ್ನು ಅನುಬಂಧ–1ರಲ್ಲಿ ಒದಗಿಸಿದೆ

ಇ) ತಾಲ್ಲೂಕಿನಲ್ಲಿ ಅಂಗನವಾಡಿ ಕೇಂದ್ರಗಳಿಗೆ ಕಟ್ಟಡಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಬಂದಿರುತ್ತದೆ.

ಈ) ಬಂದಿದ್ದಲ್ಲಿ, ಕಟ್ಟಡಗಳನ್ನು ಒದಗಿಸಲು ಕೈಗೊಂಡ ಕ್ರಮವೇನು?

ಪ್ರಸ್ತುತ ಸಾಲಿನಲ್ಲಿ ಜಮಖಂಡಿ ತಾಲ್ಲೂಕಿಗೆ ಇಲಾಖಾ ವತಿಯಿಂದ 7 ಕಟ್ಟಡ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆಯಾಗಿರುತ್ತದೆ. 6 ಕಟ್ಟಡಗಳು ವಿವಿಧ ನಿರ್ಮಾಣ ಹಂತದಲ್ಲಿದೆ. ನಬಾರ್ಡ್ ಆರ್ಥಿಕ ಸಹಾಯದಡಿ 2 ಕಟ್ಟಡ ಮಂಜೂರಗಿದೆ. ನಿವೇಶನ ಮತ್ತು ಅನುದಾನದ ಲಭ್ಯತೆಯ ಮೇರೆಗೆ ಹಂತಹಂತವಾಗಿ ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲಾಗುವುದು.

ಅನುಬಂಧ–1

ಕ್ರ ಸಂ.	ಯೋಜನೆ	2006–07ನೇ ರಾಜ್ಯಕ್ಕೆ ಸಾಲಿನಲ್ಲಿ ಒದಗಿಸಿರುವ ಅನುದಾನ	ಜಮಖಂಡಿ ತಾಲ್ಲುಕಿನಲ್ಲಿ ಒದಗಿಸಿದ ಸೌಲಭ್ಯಗಳು	
			ಭೌತಿಕ	ಆರ್ಥಿಕ ರೂ.ಗಳಲ್ಲಿ
1	ಭಾಗ್ಯಲಕ್ಷ್ಮಿ ಯೋಜನೆ	23400.00	701	–
2	ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ	100.00	ಅರ್ಜಿ ಬಂದಿಲ್ಲ	

3	ಮಹಿಳೆಯರಿಗೆ ವೃತ್ತಿ ಶಿಕ್ಷಣ ಪಡೆಯಲು ಆರ್ಥಿಕ ನೆರವು	31.86	26	30,680
4	ಬಾಲಕಿಯರಿಗಾಗಿ ವಸತಿ ನಿಲಯ	110.00	48	3.09ಲಕ್ಷ
5	ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಕ್ಷೇಮಾಭಿವೃದ್ಧಿ ನಿಧಿ	30.00	4	50.000
6	ಸಾಂತ್ವನ-ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಆರ್ಥಿಕ ನೆರವು	90.00	ಅರ್ಜಿ ಬಂದಿಲ್ಲ	
7	ಸ್ತ್ರೀ ಶಕ್ತಿ ಯೋಜನೆ	1648.00	890	8.40ಲಕ್ಷ
8	ಮಕ್ಕಳನ್ನು ಕುಟುಂಬ ವಾತಾವರಣದಲ್ಲಿ ಬೆಳೆಸಲು ಪ್ರಾಯೋಜಿತ ಕಾರ್ಯಕ್ರಮ	10.00	3	45,000
9	ನಿರಾಧಾರ ಅನಾಥ ಮಕ್ಕಳ ರಕ್ಷಣೆ ಮತ್ತು ಪೋಷಣೆ ಮತ್ತು ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಗೌರವಧನ	5599.60	795	43.26ಲಕ್ಷ
10	ದುಡಿಯುವ ಮಹಿಳೆಯರ ಮಕ್ಕಳಿಗೆ ಶಿಶುಪಾಲನಾಕೇಂದ್ರಗಳು	5581.00	–	–
11	5ನೇ ತರಗತಿಯಿಂದ 10ನೇ ತರಗತಿಯ ವಿದ್ಯಾರ್ಥಿನಿಯರಿಗೆ ಹಾಜರಾತಿ ವಿದ್ಯಾರ್ಥಿ ವೇತನ	110.44	454	1.49ಲಕ್ಷ
12	ವಿಧವೆಯರ ಮತ್ತು ದೇವದಾಸಿ ವಿವಾಹಕ್ಕೆಧನ ಸಹಾಯ	9.10	4	40,000
13	ಶಾಲಾಪೂರ್ವ ಮಕ್ಕಳ ಊಟದ ಯೋಜನೆ	24235.92	40899	229.96ಲಕ್ಷ